ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರಃ2409/2015

ಚಾಸಾಃ 5 ಪ್ರಾಸಾಃ4

ದಿನಾಂಕಃ 15.10.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಪದ್ಮಾವತಿ |
| ಗಂಡನ ಹೆಸರು | : | ದಿನೇಶ್ ಸರ್ವೆಗಾರ್ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಹಾಸ್ಟೆಲ್ ನಲ್ಲಿ ಕೆಲಸ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 09-02-2015 ರಂದು ನಾನು ಬೆಳಗ್ಗೆ 9 ಗಂಟೆಗೆ ಕೆಲಸಕ್ಕಾಗಿ ಹೋಗಿದ್ದು ಮಾರನೇ ದಿನ ದಿಃ 10-02-2015ರ ಬೆಳಗ್ಗೆ 10-45ರ ಗಂಟೆಗೆ ಕೆಲಸ ಮುಗಿಸಿ ಎ ಕೆ ಜಿ ರಸ್ತೆಯಲ್ಲಿ ಬರುತ್ತಿದ್ದಾಗ ಅಲ್ಲಿ ಚಾಸಾ-4 ರವರಿಗೆ ಆರೋಪಿತರು ಹೊಡೆದು ನೆಲಕ್ಕೆ ಬೀಳಿಸಿ ಕಾಲಿನಿಂದ ತುಳಿಯುತ್ತಿದ್ದರು. ಅದೇ ಸಮಯಕ್ಕೆ ಚಾಸಾ-1ರವರು ಅದೇ ದಾರಿಯಲ್ಲಿ ಬರುತ್ತಿದ್ದು, ಆಕೆಯನ್ನು ಆರೋಪಿತರು ಇದು ನಿನ್ನ ದಾರಿ ಅಲ್ಲ ಯಾಕೆ ಬಂದೇ ಎಂದು ಪ್ರಶ್ನಿಸಿ, ಆರೋಪಿತರೆಲ್ಲರೂ ಅವಾಚ್ಯವಾಗಿ ನಿಂಧಿಸಿ ಆಕೆಯನ್ನು ನೆಲಕ್ಕೆ ದೂಡಿ ಹೊಡೆದಿರುತ್ತಾರೆ. ಆಗ ಚಾಸಾ-2 ರವರು ಕೂಗಾಟವನ್ನು ಕೇಳಿ ಓಡಿ ಬಂದು ಬಿಡಿಸುತ್ತಿದ್ದಾಗ ಆರೋಪಿತರು ಚಾಸಾ-2 ರವರನ್ನು ಹಿಡಿದು ಆಕೆ ಧರಿಸಿದ್ದ ನೈಟಿಯನ್ನು ಹಿಡಿದು ಎಳೆದು ಹರಿದು ಹಾಕಿ ಹೊಡೆದು ಹಲ್ಲೆ ಮಾಡಿರುತ್ತಾರೆ. ಆಗ ಚಾಸಾ-3 ಮತ್ತು ಚಾಸಾ-6 ರವರು ಅಲ್ಲಿಗೆ ಓಡಿ ಬಂದಿರುತ್ತಾರೆ. ಅನಂತರ ಚಾಸಾ-1 ರವರನ್ನು ಚಾಸಾ-2 ಮತ್ತು 3 ರವರು ರಿಕ್ಷಾದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅನಂತರ ನಾನು ನನ್ನ ಮನೆಗೆ ಹೋಗಿರುತ್ತೇನೆ. ಈ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

ಸಾಕ್ಷಿ ಮುಮಾ1ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ವಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ನನ್ನ ವಿರುದ್ದ ಈ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇವೆ. ಸದ್ರಿ ಪ್ರಕರಣಗಳಲ್ಲಿ ಚಾಸಾ-1 ರಿಂದ 3 ಇರುತ್ತಾರೆ. ಅದರೊಂದಿಗೆ ನನ್ನ ಗಂಡ ದಿನೇಶ, ಮಗ ವಿಜೇಂದ್ರ ರವರು ಇರುತ್ತಾರೆ. ಸದ್ರಿ ಪ್ರಕರಣ ವಿಚಾರಣೆಗೆ ಬಾಕಿ ಇದೆ. ದಾರಿ ವಿಚಾರದಲ್ಲಿ ನಮ್ಮ ಮತ್ತು ಆರೋಪಿತರ ನಡುವೆ ತಕರಾರು ಇದೆ. ದಾರಿಗಾಗಿ 3 ಅಡಿ ಜಾಗವನ್ನು ಬಿಡುವಂತೆ ಆರೋಪಿತರನ್ನು ಕೋರಿಕೊಂಡಿರುತ್ತೇವೆ. 4 ಚಕ್ರದ ವಾಹನ ಚಲಿಸುವಂತಹ ವಿಸ್ತೀರ್ಣದ ದಾರಿಯ ಅವಶ್ಯಕತೆ ಇರುತ್ತದೆ. ಆರೋಪಿತರು ಅದು ಸ್ವಂತ ಜಾಗವಾಗಿದ್ದು ಅದನ್ನು ಕೊಡಲಾಗುವುದಿಲ್ಲ ಎಂದು ಹೇಳುತ್ತಾರೆ. ನಾವು ತೊಂದರೆ ನೀಡಬಾರದೆಂದು ಆರೋಪಿತರು ನಮ್ಮ ವಿರುದ್ದ ನಿರ್ಭಂಧಕ ಆಜ್ಞೆ ಪಡೆದಿರುತ್ತಾರೆ ಎಂದರೆ ಸರಿ.

ಆರೋಪಿತರ ಜಾಗವನ್ನು ಬಲತ್ಕಾರವಾಗಿ ಕಬಳಿಸಲು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಾವು ಆರೋಪಿತರ ವಿರುದ್ದ ಪದೇ ಪದೇ ಸುಳ್ಳು ಪ್ರಕರಣವನ್ನು ದಾಖಲಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಸದ್ರಿ ದಿನ ಆರೋಪಿತರ ಕೈಯಲ್ಲಿ ಯಾವುದೇ ಆಯುಧಗಳು ಇರಲಿಲ್ಲ. ಚಾಸಾ-4 ರವರ ಮನೆ ನಮ್ಮ ಮನೆಯ ಅಕ್ಕಪಕ್ಕದಲ್ಲಿ ಇಲ್ಲ. ಅವರ ಮನೆ ಸ್ವಲ್ಪ ದೂರದಲ್ಲಿ ಇರುತ್ತದೆ. ಸದ್ರಿ ದಿನ ಚಾಸಾ-4 ರವರು ಸ್ಥಳಕ್ಕೆ ಯಾಕೆ ಬಂದಿದ್ದರು ಎಂದು ನನಗೆ ತಿಳಿದಿಲ್ಲ.

ನಾನು ಕುಂದಾಪುರದ ಹಾಸ್ಟೆಲ್ ನಲ್ಲಿ ಕೆಲಸ ಮಾಡುತ್ತೇನೆ. ನಾನು ಬಂದಾಗ ಚಾಸಾ-4 ರವರು ಬಿದ್ದಿದರು. ಚಾಸಾ-4 ರವರನ್ನು ಯಾರು ಉಪಚರಿಸುತ್ತಿರಲಿಲ್ಲ. ಚಾಸಾ-4 ರವರ ಬಟ್ಟೆ ಹರಿದು ರಕ್ತ ಬಂದಿರುತ್ತದೆ. ಚಾಸಾ-1 ರವರಿಗೆ ಎಷ್ಟು ಪೆಟ್ಟು ಹೊಡೆದಿರುತ್ತಾರೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಚಾಸಾ-1 ಮತ್ತು 4 ರವರಿಗೆ ಯಾರು ಎಲ್ಲಿ ಎಷ್ಟು ಪೆಟ್ಟು ಹೊಡೆದಿದ್ದಾರೆ ಎಂದು ನನಗೆ ಹೇಳಲಾಗುವುದಿಲ್ಲ. ಚಾಸಾ-1, 2 ಮತ್ತು 4 ರವರಿಗೆ ಪೆಟ್ಟಾಗಿರುತ್ತದೆ. ಚಾಸಾ-2 ರವರಿಗೆ ಎಷ್ಟು ಪೆಟ್ಟು ಹೊಡೆದಿರುತ್ತಾರೆ ಎಂದು ಹೇಳಲಾಗುವುದಿಲ್ಲ. ಆಕೆಗೂ ರಕ್ತ ಗಾಯವಾಗಿತ್ತು. ಚಾಸಾ-1 ಮತ್ತು 2 ರವರ ಬಟ್ಟೆಗಳು ಹರಿದಿತ್ತು. ಅವರಿಬ್ಬರಿಗೆ ರಕ್ತಗಾಯವಾಗಿದ್ದು ಬಟ್ಟೆ ಹರಿದಿದ್ದ ಬಗ್ಗೆ ನನ್ನ ಹೇಳಿಕೆಯಲ್ಲಿ ಪೊಲೀಸರಿಗೆ ತಿಳಿಸಿರುತ್ತೇನೆ.

ನನ್ನ ಹಾಸ್ಟೆಲ್ ಕೆಲಸ ಬೆಳಗ್ಗೆ 10 ರಿಂದ ಮಾರನೇ ದಿನ ಬೆಳಗ್ಗೆ 10 ಗಂಟೆಯವರೆಗೂ ಕೆಲಸ ಮಾಡಬೇಕು. ನಾನು ಗಲಾಟೆ ತಪ್ಪಿಸಲು ಹೋಗಿಲ್ಲ. ಆದರೆ ಸುಮ್ಮನೆ ನಿಂತಿದ್ದೆ. ಚಾಸಾ-3 ರವರು ಚಾಸಾ-1 ಮತ್ತು 2 ರವರೊಂದಿಗೆ ರಿಕ್ಷಾದಲ್ಲಿ ಆಸ್ಪತ್ರೆಗೆ ಹೋಗಿರುತ್ತಾರೆ. 2-3 ದಿನಗಳ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನನ್ನ ಸಮಕ್ಷಮದಲ್ಲಿ ಯಾವುದೇ ಬಟ್ಟೆ ಅಥವಾ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ.

ಆರೋಪಿತರು ಮೇಲೆ ಹೇಳಿದ ಕೃತ್ಯವನ್ನು ಎಸಗಿಲ್ಲ ಎಂದರೆ ಸರಿಯಲ್ಲ. ರಸ್ತೆ ಬಗ್ಗೆ ವಿವಾದ ಇರುವುದರಿಂದ ಹಲವಾರು ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದು ಆ ಪೈಕಿ ಇದು ಒಂದು ಪ್ರಕರಣವಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 4 ರವರು ಯಾವುದೇ ಘಟನೆ ನಡೆದಿಲ್ಲವಾದರೂ ನಾನು ಅದನ್ನು ನೋಡಿಲ್ಲವಾದರೂ ಅವರ ಕೋರಿಕೆ ಮೇರೆಗೆ ಜಾಗದ ವಿಚಾರದಲ್ಲಿ ಇರುವ ತಗಾಧೆಯಿಂದ ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆಸ ರಿಯಲ್ಲ. ನಾನು ಘಟನೆಯ ಪ್ರತ್ಯಕ್ಷದರ್ಶಿ ಅಲ್ಲವಾದ ಕಾರಣ ಪಂಚನಾಮೆಗೆ ನನ್ನ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಪ್ರಕರಣಕ್ಕೆ ಅನುಗುಣವಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವುದೇ ಘಟನೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**